66. ಉಣಕಲ್ ಸಿದ್ದೇಶ್ವರ ನಗರ ಸಿ.ಟಿ.ಎಸ್.ನಂ. 3375

67. ಕೃಷ್ಣಪೂರ ಅನಂದನಗರ

68. ಹಳೇ ಹುಬ್ಬಳ್ಳಿ ಗ್ರಿಡ್ ರಸ್ತೆ ಬದಿಗೆ

69. ಹಳೇ ಕಮೇಲಿ, ಧಾರವಾಡ

70. ನವಲೂರ ಅಗಸಿ

71. ನವಲೂರ

72. ಮದಾರಮಡ್ಡಿ ಮ್ಯಾದಾರ ಓಣಿ ಕೊಠವರ ಓಣಿ

73. ಜನ್ನತ ನಗರ

74. ''

75. ''

ವಿಷಯ:- ಕೊಡಗು ಜಿಲ್ಲೆಯಲ್ಲಿ ರೇಷ್ಮೆ ಕೃಷಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 186 (509)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಕೊಡಗು ಜಿಲ್ಲೆಯಲ್ಲಿ ಎಷ್ಟು ಎಕರೆಗಳಲ್ಲಿ ರೇಷ್ಮೆ ಕೃಷಿಯನ್ನು ವ್ಯವಸಾಯ ಮಾಡಲಾಗುವುದು (ತಾಲ್ಲೋಕುವಾರು ವಿವರಣೆ ನೀಡುವುದು)

2. ಕುಶಾಲನಗರದಲ್ಲಿರುವ ರೇಷ್ಮೆ ಮಾರಾಟ ಕೇಂದ್ರ ವಹಿವಾಟಿನ ಬಗ್ಗೆ ಅಸಮರ್ಪಕ ವ್ಯವಸ್ಥೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಯಾವ ಯಾವ ಕೊರತೆಗಳು ಈ ಮಾರಾಟ ಕೇಂದ್ರದಲ್ಲಿ ಇದೆ (ವಿವರ ನೀಡುವುದು)

3. ಸಿಬ್ಬಂದಿ ಕೊರತೆ, ಇತರೆ ವ್ಯವಸ್ಥೆಗಳ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

1. 1) ಮಡಿಕೇರಿ - 123.00 ಎಕರೆ

2) ವಿರಾಜಪೇಟೆ - 164.20 ಎಕರೆ

3) ಸೋಮವಾರಪೇಟೆ - 802.20 ಎಕರೆ

ಒಟ್ಟು - 1090.00

2. ಹೌದು.

ಕುಶಾಲನಗರದಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆಗೆ ಸ್ವಂತ ಕಟ್ಟಡ ಇರುವುದಿಲ್ಲ. ಈಗಾಗಲೇ ಅಂತಹ ಕಟ್ಟಡ ನಿರ್ಮಾಣವನ್ನು ಕೈಗೊಂಡಿರುತ್ತದೆ. ಸದರಿ ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗಾರರಿಂದ ಖರೀದಿಸುವ ಗೂಡುಗಳನ್ನು ವಿಲೇವಾರಿ ಮಾಡುವಲ್ಲಿ ಸ್ವಲ್ಪ ವಿಳಂಬ ಈ ಹಿಂದೆ ಇತ್ತು. ಅದನ್ನು ಸರಿಪಡಿಸಲಾಗಿರುತ್ತದೆ.

3. ಜಿಲ್ಲೆಯಲ್ಲಿ 76 ಹುದ್ದೆಗಳು ಮಂಜೂರಾಗಿದ್ದು ಹಾಲಿ 33 ಹುದ್ದೆಗಳನ್ನು ತುಂಬಲಾಗಿರುತ್ತದೆ. ಉಳಿದ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಮಾರುಕಟ್ಟೆ ವ್ಯವಸ್ಥೆಯನ್ನು ಸಹ ಸುಧಾರಿಸಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ವಿಷಯ:- ಕುಂದಾಪುರದ ಪುರಸಭೆಗೆ ಸಮಗ್ರ ಪಟ್ಟಣಾಭಿವೃದ್ಧಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 187 (291)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕುಂದಾಪುರ ಪುರಸಭೆಗೆ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಪಟ್ಟಣಾಭಿವೃದ್ಧಿ ಯೋಜನೆ ಮಂಜೂರಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈಗಾಗಲೇ ಬಿಡುಗಡೆಯಾದ ಹಣವೆಷ್ಟು? ಮತ್ತು ವೆಚ್ಚ ಮಾಡಲಾದ ಹಣವೆಷ್ಟು?

ಶ್ರೀ ಮಿರಾಜುದ್ದೀನ್ ಎಸ್.ಪಾಟೀಲ್ (ಪೌರಾಡಳಿತ ಸಚಿವರು):-

ಅ) ಹೌದು.

ಆ) ರೂ.38.33 ಲಕ್ಷ ಬಿಡುಗಡೆ ಮಾಡಲಾಗಿದೆ. ಆದರೆ ಯಾವುದೇ ಹಣವನ್ನು ಇದುವರೆವಿಗೂ ವೆಚ್ಚ ಮಾಡಿರುವುದಿಲ್ಲ.

ವಿಷಯ:- ಶಂಕರನಾರಾಯಣಕ್ಕೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 188 (290)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಂಕರನಾರಾಯಣದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿ ನಿಲಯ ಮಂಜೂರಾಗಿರುವುದು ನಿಜವೇ?

ಆ) ಮಂಜೂರಾಗದಿದ್ದಲ್ಲಿ, ಮಂಜೂರು ಮಾಡುವ ಯೋಜನೆ ಸರಕಾರದ ಮುಂದಿದೆಯೇ?